*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 01-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ</u>–

5. ನೀವು ಯಾವತ್ತಾದರೂ ಚಾಸಾ.14 ರವರ ತೋಟಕ್ಕೆ ಕೆಲಸಕ್ಕೆ ಹೋಗಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿದು ನಾನೇ ಆರೋಪಿ ಮತ್ತು ಮೃತನನ್ನು ಸದರಿಯವರ ತೋಟದ ಪಟ್ಟಿ ಅಂದರೆ ಫರ್ಮನೆಂಟ್ ಕೆಲಸಕ್ಕೆ ಸೇರಿಸಿದ್ದೆನು  ಎನ್ನುತ್ತಾರೆ. ನೀವು ಆರೋಪಿ ಮತ್ತು ಮೃತರ ಹೆಸರುಗಳನ್ನು ಸದರಿ ತೋಟದ ಹಾಜರಾತಿ ಪುಸ್ತಕದಲ್ಲಿ ನಮೂದಿಸಿ ಪಿ.ಎಫ್ ಲೀಸ್ಟಿಗೆ ಸೇರಿಸಿದ್ದಿರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.  ಕೆಲಸಗಾರರನ್ನು ಎಸ್ಟೇಟಿಗೆ ಬಿಟ್ಟರೆ ಕಮಿಷನ್ ಕೊಡುತ್ತಾರೆ, ನೀವು ಆರೋಪಿ ಮತ್ತು ಮೃತನನ್ನು ತೋಟದ ಕೂಲಿ ಕೆಲಸಕ್ಕೆ ಬಿಟ್ಟ ಬಗ್ಗೆ ನೀವು ಅವರಿಂದ ಕಮಿಷನ್ ಹಣವನ್ನು ಸ್ವೀಕರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಎಸ್ಟೇಟಿನ ಮಾಲೀಕರ ಮನೆಯ ಹತ್ತಿರದಲ್ಲಿ ಕೆಳಭಾಗದಲ್ಲಿ ಅವರ ಕೂಲಿ ಲೈನ್ ಮನೆಗಳಿವೆ. ಅವರ ಎಸ್ಟೇಟ್ ಹುಳುವಾಗಿಲು ರಸ್ತೆಯಲ್ಲಿ ಬರುತ್ತದೆ. ಕೂಲಿ ಲೈನಿನಲ್ಲಿ 4 ಮನೆಗಳಿದ್ದವು. ನೀವು ಈ ದಿನದ ಹಿಂದೆ ಆರೋಪಿ ಮತ್ತು ಮೃತನನ್ನು ಚಾಸಾ.14 ರವರ ತೋಟಕ್ಕೆ ನೀವೇ ಸೇರಿಸಿದ್ದ ಬಗ್ಗೆ ಯಾರಿಗಾದರೂ ಹೇಳಿಕೆ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಮೃತನನ್ನು ಅಲ್ಲಿಗೆ ಸೇರಿಸಿದ್ದ ಬಗ್ಗೆ ಆತನ ಮನೆಯವರಿಗೆ ತಿಳಿದಿತ್ತೇ

ಎಂದರೆ ಸಾಕ್ಷಿ ಆತನ ತಂದೆಯಾದ ಪ್ರಾಸಾ.2 ಶಾಂತಪ್ಪನಿಗೆ ತಿಳಿದಿತ್ತು, ಉಳಿದವರಿಗೆ ಗೊತ್ತಿಲ್ಲ ಎನ್ನುತ್ತಾರೆ.

6. ಕೈಮರದಲ್ಲಿ ಆಟೋ ನಿಲ್ದಾಣ ಇದೆ ಎಂದರೆ ಸರಿ. ಕೈಮರದಿಂದ ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ 4 ಕಿ.ಮೀ ದೂರವಾಗುತ್ತದೆ ಎಂದರೆ ಸಾಕ್ಷಿ ನಮ್ಮ ಮನೆಯಿಂದ ಅಲ್ಲಿಗೆ 7 ಕಿ.ಮೀ. ದೂರವಾಗುತ್ತದೆ ಎನ್ನುತ್ತಾರೆ. ಆಸ್ಪತ್ರೆಯಲ್ಲಿ ನೀವು ಹೇಳಿಕೆ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆಸ್ಪತ್ರೆಯಲ್ಲಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡಿದ್ದನ್ನು ಹೊರತುಪಡಿಸಿ ನೀವು ಯಾವುದಾದರೂ ದಾಖಲೆಗೆ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

7. ಪೊಲೀಸರು ನಿಮ್ಮನ್ನು ಯಾವಾಗ ಠಾಣೆಗೆ ಕರೆಸಿದ್ದರು ಎಂದರೆ ಸಾಕ್ಷಿ ನಾನು ಆಸ್ಪತ್ರೆಗೆ ಹೋದ ಒಂದು ವಾರದ ಬಳಿಕ ನನ್ನನ್ನು ಕರೆಸಿದ್ದರು ಎನ್ನುತ್ತಾರೆ. ಪೊಲೀಸ್ ಠಾಣೆಯಲ್ಲಿ ಪೊಲೀಸರು ನನ್ನ ಸಹಿಯನ್ನು ಪಡೆದಿಲ್ಲ ಮತ್ತು ಯಾವುದೇ ಹೇಳಿಕೆಯನ್ನು ನನಗೆ ಓದಿ ಹೇಳಿಲ್ಲ. ನೀವು ಪೊಲೀಸ್ ಠಾಣೆಗೆ ಹೋದ ದಿನದಂದೇ ಮೊದಲ ಬಾರಿಗೆ ಪೊಲೀಸರು ತೋರಿಸಿದ ಮೇರೆಗೆ ಶೇಷಪ್ಪನನ್ನು ನೋಡಿ ಗುರುತಿಸುತ್ತಿದ್ದೀರಿ ಎಂದು ಹೇಳಿಕೆ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ದಿನ ಪೊಲೀಸರು ಆರೋಪಿಯನ್ನು ನಿಮಗೆ ತೋರಿಸಿದ ನಂತರ ನೀವು ಆರೋಪಿಯನ್ನು ವಿಚಾರಿಸಿದಾಗ ಆತನ ಹೆಸರು ಮತ್ತು ವಿಳಾಸ ನಿಮಗೆ ತಿಳಿಯಿತು ಎಂದು ನೀವು ಪೊಲೀಸರಿಗೆ ಹೇಳಿಕೆ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಪೊಲೀಸರಿಗೆ ಯಾವುದಾದರೂ ಹೇಳಿಕೆಯನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಈ ಕೇಸಿನ ಬಗ್ಗೆ ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿಯೇ ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿ.

8. ಪೊಲೀಸರು ನಿಮಗೆ ಆರೋಪಿಯನ್ನು ತೋರಿಸಿ ಆತನ ಬಗ್ಗೆ

ಹೇಳಿದ್ದರಿಂದಲೇ ನಿಮಗೆ ಆತನ ಬಗ್ಗೆ ತಿಳಿದಿದೆ ಹೊರತು ಹಿಂದೆ ಆತನ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಪರಿಚಯ ನಿಮಗೆ ಇತ್ತು, ತೋಟದ ಮಾಲೀಕರಿಂದ ಆರೋಪಿಯೇ ಶೇಷಪ್ಪನನ್ನು ಕೊಲೆ ಮಾಡಿದ ಬಗ್ಗೆ ತಿಳಿಯಿತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 2 ತಿಂಗಳ ಬಳಿಕ ಪೊಲೀಸರು ನಿಮ್ಮನ್ನು ಮತ್ತು ಮೃತನ ತಂದೆತಾಯಿಯನ್ನು ಠಾಣೆಗೆ ಕರೆಸಿದ್ದಾಗಿ, ಆ ಸಮಯಕ್ಕೆ ಪೊಲೀಸರು ಆರೋಪಿಯನ್ನು ದಸ್ತಗಿರಿ ಮಾಡಿ ಕರೆತಂದಿದ್ದಾಗಿ, ಆ ದಿನ ನೀವು ಆರೋಪಿಯನ್ನು ನೋಡಿ ಗುರುತಿಸಿ ಆತನ ಬಗ್ಗೆ ತಿಳಿಯಿತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನೀವು ಮೃತನಿಗೆ ಸಂಬಂಧಿಕನಾಗಿರುವ ಕಾರಣ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯನುಡಿದಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ